


### ಗೌರವಕ್ಕೆ ಪುನೀತ್ ಅರ್ಹರು

ಪುನೀತ್‌ಗೆ ಮುಖಪುಟ ಲೇಖನ ಮೂಲಕ 'ಸುಧಾ' ಸಲ್ಲಿಸಿದ ಗೌರವಕ್ಕೆ ಅವರು ಅರ್ಹರಾಗಿದ್ದಾರೆ. ವಿಶಾಖ ಬರಹ ಹಾಗೂ ಮುಖಪುಟ ಚಿತ್ರ ಚೆನ್ನಾಗಿದೆ.

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ
ಪಿ.ಗೋವಿಂದರಾಜ್, ಎಚ್.ಎನ್.ವಿಶ್ವನಾಥ, ಶಿವಮೊಗ್ಗ/ ಬೇಲೂರು ದ.ಶಂ.ಪ್ರಕಾಶ್, ಸುಧಾರಾಜ್, ಮೈಸೂರು/ ಮುಗುಳುವಳ್ಳಿ ಸದಾಶಿವ, ಚಿಕ್ಕಮಗಳೂರು/ ಬಿ.ಎನ್.ಸೊಲ್ಲಾಪುರೆ, ಕಮಲನಗರ/ ಕೆ.ಎಲ್.ಬಾಬು, ಬೀರೂರು/

### ಚಿನ್ನದ ಜಾಹೀರಾತು ಸಲ್ಲದು

ಚಿನ್ನ ಕೊಟ್ಟರೆ ಸಾಲ ಕೊಡುವ ಜಾಹೀರಾತಿಗೆ ಪುನೀತ್ ಪ್ರೋತ್ಸಾಹ ಕೊಡಬಾರದಿತ್ತು. ಇದರಿಂದ ಚಿನ್ನ ಒತ್ತೆ ಇಡಲು ಅಭಿಮಾನಿಗಳಿಗೆ ಕರೆಕೊಟ್ಟಂತೆ ಆಗುತ್ತದೆ.

-ಕೆ.ಎಂ.ಮಧ್ವರಾಯ, ಬೆಂಗಳೂರು

### ತಂದೆ ಜತೆ ಚಿತ್ರ ಬೇಕಿತ್ತು

ಪುನೀತ್ ಅವರು ತಮ್ಮ ತಂದೆ ಡಾ.ರಾಜ್ ಜತೆ ಅಭಿನಯಿಸಿದ ಒಂದಾದರೂ ಚಿತ್ರ ಇದ್ದಿದ್ದರೆ ಮತ್ತಷ್ಟು ಮೆರಗು ಬರುತ್ತಿತ್ತು.

-ವಿಭಾ ಮುರಳೀಧರ್, ತುಮಕೂರು

### ಮಾರ್ಮಿಕ ಚಿತ್ರ

ಮಹ್ಮದ್ ರಚಿಸಿದ 'ಬಚಾವ್: ಆದರೆ...' ವ್ಯಂಗ್ಯ ಚಿತ್ರ ಮಾರ್ಮಿಕವಾಗಿತ್ತು.

-ಸರ್ವಜಿತ, ಹುಬ್ಬಳ್ಳಿ

### ಸಿಂಗಪುರದಲ್ಲಿ ಒಳ್ಳೆಯ ಲೈಬ್ರರಿ

ಟಿ. ಗುರುರಾಜಾಚಾರ್ ಸಿಂಗಪುರದ ಲೈಬ್ರರಿ ಪರಿಚಯ ಚೆನ್ನಾಗಿತ್ತು.

-ಮೊಳಕಾಲ್ಮುರು ಸುರೇಶ, ಬಳ್ಳಾರಿ/ ಎಂ.ಸರ್ದಾರ್, ಅರಸೀಕೆರೆ

### ಬಡವರಿಗೆ ದೊರೆತರೆ ಸಾರ್ಥಕ

ವೈದ್ಯಕೀಯ ತಂತ್ರಜ್ಞಾನ ವರದಾನವೇ? (ಬರಹ: ಸುನಂದಾ ಕುಲಕರ್ಣಿ) ಖಚಿತವಾಗಿ ವರದಾನವೇ. ಬಹಳಷ್ಟು ಸಾರಿ ಉಳ್ಳವರಿಗೆ! ತಂತ್ರಜ್ಞಾನದ ಲಾಭ ಬಡವರಿಗೂ ದೊರೆತರೆ ಸಾರ್ಥಕ.

-ಎಂ.ಜಿ.ಆರ್. ಶೇಖರ್, ದೊಡ್ಡಬಳ್ಳಾಪುರ

### ಸುಂದರ ಚಿತ್ರಣ

'ಹೀಗೊಂದು ಅಶ್ವಶಾಲೆ' ವಸುಂಧರಾ ಎಸ್. ಕುಮಾರ್ ಲೇಖನ ಹಾಗೂ ಚಿತ್ರ ಮನಸೆಳೆಯಿತು.

-ತರಂಗಿಣಿ. ತುಮಕೂರು

### ಆಪ್ತರಾದ ಗೋಡ್ಖಿಂಡಿ

ಉಮಾ ಅನಂತ್ ಪರಿಚಯಿಸಿದ ಬಾನ್ಸುರಿ ವಾದಕ ಪ್ರವೀಣ ಗೋಡ್ಖಿಂಡಿಯವರ ಲೇಖನ ಆಪ್ತವೆನಿಸಿತು.

-ರಾಜಶೇಖರಗೌಡ, ಕೊಟ್ಟೂರು

### ಕಿರುಗತೆ ಹೆಚ್ಚಿರಲಿ

ಮಿನಿಕಥೆ ಸತ್ಯಬೋಧರ 'ಚಾಲಾಕಿ' 'ಶವಗಾರದ ನಾಟಕ' (ಅನು: ಡಿ.ಎನ್. ಶ್ರೀನಾಥ್) ಚೆನ್ನಾಗಿದ್ದವು. ಕಿರುಗತೆಗಳು ಖುಷಿ ನೀಡುತ್ತವೆ. ಅಂತಹ ಕಿರುಗತೆಗಳನ್ನು ಹೆಚ್ಚಾಗಿ ಪ್ರಕಟಿಸಿ.

-ಬಿ.ಎಸ್. ರಮೇಶ್, ಬೆಂಗಳೂರು/ ಸು.ವಿಜಯಲಕ್ಷ್ಮಿ, ಶಿವಮೊಗ್ಗ

### ಗುವಾಹಟಿಯಲ್ಲ, ದಿಸ್‌ಪುರ್

ಟೆನಿಸ್ ಪ್ರತಿಭೆ ಸೋಮದೇವ್ ಲೇಖನದಲ್ಲಿ ಅವರು ಜನಿಸಿದ್ದು ಅಸ್ಸಾಂನ ರಾಜಧಾನಿ ಗುವಾಹಟಿಯಲ್ಲಿ ಎಂದು ಬರೆಯಲಾಗಿದೆ. ಆದರೆ ಅಸ್ಸಾಂನ ರಾಜಧಾನಿ 'ದಿಸ್‌ಪುರ್' ಎಂದು ಇರಬೇಕಾಗಿತ್ತು.

-ಜೆ. ಫಾತಿಮಾ ಮೇರಿ, ಚಿಕ್ಕಮಗಳೂರು

(ಹೌದು, ಗುವಾಹಟಿ ಹೊರವಲಯದ ದಿಸ್‌ಪುರ್ ಸರಿ.)

-ಸಂ.

### ಮಗನ ಶತ್ರು ತಂದೆ ತಾಯಿ!

ಸುಖೀಭವ ಅಂಕಣದ ಒಂದು ಪತ್ರದಲ್ಲಿ 24 ವರ್ಷದ ಯುವಕನನ್ನು ಬೆತ್ತಲೆಯಾಗಿ ತಂದೆ ತಾಯಿ ತಮ್ಮ ನಡುವೆ ಮಲಗಿಸಿಕೊಳ್ಳುವುದನ್ನು ಓದಿ ವಿಷಾದವೆನಿಸಿತು. ಮಗನ ವ್ಯಕ್ತಿತ್ವವನ್ನೇ ನಾಶ ಮಾಡುವ ಇಂತಹ ಅಪ್ಪ ಅಮ್ಮ ನಿಜಕ್ಕೂ ಮಗನ ಶತ್ರುವೆಂದರೆ ತಪ್ಪಲ್ಲ. ಛೆ! ಛೆ!

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ

### ಚಾಲಾ ಬಾಗುಂದಿ!

ಬಿ.ಎಲ್. ವೇಣುರವರ ಕಾದಂಬರಿ 'ಸಮರ್ಥರು' ಓದುಗರನ್ನು ರಂಜಿಸುತ್ತಿದೆ. ಘಟನೆಗಳು ಮುಂದೆ ರೋಚಕ ತಿರುವುಗಳನ್ನು ತೆಗೆದುಕೊಳ್ಳುತ್ತವೆಂದು ಖಂಡಿತ ಅಂದುಕೊಳ್ಳಬಹುದು. ಕನ್ನಡದ ಜೊತೆ, ತೆಲುಗು, ಇಂಗ್ಲಿಷ್ ಭಾಷೆಗಳು ಹದವಾಗಿ ಸೇರಿವೆ. ಯಶಸ್ವಿ ಚಲನಚಿತ್ರವಾಗುವ ಎಲ್ಲ ಲಕ್ಷಣಗಳನ್ನೂ ಈ ಧಾರಾವಾಹಿ ಹೊಂದಿದೆ.

ರೇಷ್ಮಾಳ ಗೆಳತಿಯರು ಹಾರೈಸಿದಂತೆ ಅವಳ 'ಲವ್' ಟ್ರಾಜಿಡಿಯಾಗದಿರಲು ವೇಣುರವರು ಮನಸ್ಸು ಮಾಡಲಿ!

ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಮನಸೂರೆಗೊಂಡ ಧಾರಾವಾಹಿ

'ಸಮರ್ಥರು' ಧಾರಾವಾಹಿ ಪ್ರತಿವಾರ ಕಾಯುವಂತೆ ಮಾಡಿದೆ. ಪಾತ್ರಪೋಷಣೆ, ಚುರುಕಿನ ಸಂಭಾಷಣೆ ಅನಿರೀಕ್ಷಿತ ತಿರುವುಗಳಿಂದ ಮನಸೂರೆಗೊಳ್ಳುತ್ತಿದೆ.

-ಜಿ.ಎಸ್. ನಾರಾಯಣ್, ಎಸ್. ಉಮಾದೇವಿ, ಆರ್.ಎಸ್. ಗೋವಿಂದ, ದಾವಣಗೆರೆ/ ಬಿ.ವೈ. ಕೃಷ್ಣಪ್ರಸಾದ್, ಮೈಸೂರು

### ಗ್ರಂಥ ಆಹ್ವಾನ

ಬೆಂಗಳೂರಿನ ವಿಶಿಷ್ಠ ಪ್ರಕಾಶನವು ಸಾಹಿತಿ 'ಜರಗನಹಳ್ಳಿ ಶಿವಶಂಕರ ಸಾಹಿತ್ಯ ಪುರಸ್ಕಾರ' ಪ್ರಶಸ್ತಿ ಸ್ಥಾಪಿಸಿದ್ದು. ಲೇಖಕರಿಂದ ಕವನ, ಕಥೆ, ನಾಟಕ. ಕಾದಂಬರಿ, ವಿಮರ್ಶೆ, ಪ್ರವಾಸ ಕಥನ, ಆತ್ಮಕಥನ, ಆತ್ಮಚರಿತ್ರೆ ಪ್ರಕಾರಗಳ ಗ್ರಂಥಗಳನ್ನು ಆಹ್ವಾನಿಸಿದೆ. ಆದರೆ ಎಂ.ಫಿಲ್, ಪಿ.ಹೆಚ್.ಡಿ. ಹಾಗೂ ಪದವಿ ಯೋಜನೆಗಳಿಗೆ ಸಿದ್ಧಪಡಿಸಿದ ಗ್ರಂಥಗಳಾಗಿರಬಾರದು.

ಪ್ರಶಸ್ತಿಯು 5000 ರೂ. ನಗದು, ಪ್ರಶಸ್ತಿಪತ್ರ, ಫಲಕ ಒಳಗೊಂಡಿರುತ್ತದೆ. ಮೊದಲ ಪ್ರಶಸ್ತಿಗೆ ಜನವರಿ 2004ನೇ ಇಸ್ವಿಯಿಂದ ಮುದ್ರಣಗೊಂಡ ಗ್ರಂಥಗಳನ್ನು ಕಳುಹಿಸಲು ಅವಕಾಶ ಕಲ್ಪಿಸಲಾಗಿದೆ. ಮುಂದಿನ ವರ್ಷದಿಂದ ಆಯಾ ಸಾಲಿನಲ್ಲಿ ಮುದ್ರಣಗೊಂಡ ಗ್ರಂಥಗಳನ್ನು ಮಾತ್ರ ಪರಿಗಣಿಸಲಾಗುವುದು.

ಗ್ರಂಥದ ಮೂರು ಪ್ರತಿಗಳನ್ನು ಡಿಸೆಂಬರ್ 31ರ ಒಳಗೆ: ವಿ.ಎಸ್. ಹಿರೇಮಠ, ನಂ. 4, 2ನೇ ಕ್ರಾಸು, ಹಳೇ ಪೊಲೀಸ್‌ಸ್ಟೇಶನ್ ರಸ್ತೆ, ಕೆ.ಆರ್. ಪುರಂ, ಬೆಂಗಳೂರು–560036 ಕಳಿಸಬೇಕು. ಫೋ: 9741454312.

